ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ, ಈಗ ನನ್ನ ಹತ್ತಿರ ಬಂದು ಕೇಳಿಕೊಂಡು ಹೋಗಿ, ಸುಮ್ಮನೆ ಕುಳಿತುಕೊಳ್ಳುತ್ತಿದ್ದಾರೆ

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಉತ್ತರ ಬೇಕಾಗಿಲ್ಲ ಎಂದು ಕಾಣುತ್ತದೆ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಮಾನ್ಯ ಸದಸ್ಯರು ನನ್ನ ಹತ್ತಿರ ಬಂದು ಕುಳಿತುಕೊಂಡು ಎಲ್ಲಾ ನೋಡಿಕೊಂಡು ಹೋಗಿ ನಾನು ಪ್ರಶ್ನೆ ಕೇಳುವುದಿಲ್ಲ ಎಂದು ಕುಳಿತುಕೊಂಡರೆ ಹೇಗೆ ?

VII. ಬಂಟ್ವಾಳ ತಾಲ್ಲೂಕಿನ ವಿಟ್ಲದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಹಿಳಾ ವೈದ್ಯರನ್ನು ನೇಮಿಸುವುದೂ.

ಶ್ರೀ ಬಿ. ಎ. ಉಮರಬ್ಬ.—ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳ ತಾಲ್ಲೂಕಿನ ವಿಟ್ಲದಲ್ಲಿ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಇದ್ದು, ಇದರಲ್ಲಿ ಓರ್ವ ವೈದ್ಯಾಧಿಕಾರಿಗಳು ಮಾತ್ರ ಇದ್ದಾರೆ. ಈ ಆಸ್ಪತ್ರೆಗೆ ಹಿಂದಿನ ವರ್ಷಗಳಲ್ಲಿ ಮಹಿಳಾ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡುತ್ತಾ ಬಂದಿದ್ದು, ಆದರೆ ಸಂಬಂಧಪಟ್ಟವರು ಕೆಲಸಕ್ಕೆ ಇದುವರೆವಿಗೂ ಹಾಜರಾಗಿಲ್ಲ. ಕಾರಣ ಏನೆಂದು ತಿಳಿಯದೆ ಆ ಪ್ರದೇಶದ ಸಾರ್ವಜನಿಕರು ತಂಬಾ ಬೇಸತ್ತಿದ್ದಾರೆ ಮತ್ತು ನಿರಾಶರಾಗಿದ್ದಾರೆ.

ಇತ್ತೀಚಿನ ಸುದ್ದಿಯಂತೆ ಈ ಬಾರಿಯೂ ಸಹ ಓರ್ವ ಮಹಿಳಾ ವೈದ್ಯಾಧಿಕಾರಿಯು ನೇಮಕಾತಿ ಆಗಿದೆ ಎಂದು ನನ್ನ ಗಮನಕ್ಕೆ ಬಂದಿದ್ದು ಅವರೂ ಸಹ ಇಹುವರೆಗೆ ಕೆಲಸಕ್ಕೆ ಹಾಜರಾಗಲಿಲ್ಲ. ವಿಟ್ಲ ನಗರ ಮಂತ್ತು ಆಸುಪಾಸಿಗೆ ಇದೊಂದೇ ಪ್ರಮುಖ ಆಸ್ಪತ್ರೆ ಇದ್ದು, ಇಲ್ಲಿ ಓರ್ವ ಮಹಿಳಾ ವೈದ್ಯಾಧಿಕಾರಿಯು ಅವಶ್ಯಕತೆ ತೀಫ್ರವಾಗಿದೆ. ಜನರ ಈ ಕೋರಿಕೆಯನ್ನು ಈಡೇರಿಸುವ ದಿಸೆಯಲ್ಲಿ ಮಾನ್ಯ ಸರಕಾರ ಸೂಕ್ತ ಕ್ರಮವನ್ನು ಶೀಫ್ರದಲ್ಲಿ ಕೈಕೊಳ್ಳುವ ಬಗ್ಗೆ ಆಶಿಸುತ್ತೇನೆ ಹಾಗೂ ಈ ಮೂಲಕ ಒತ್ತಾಯಿಸುತ್ತೇನೆ.

ಎರಡನೆಯದಾಗಿ. ಸದರಿ ಆಸ್ಪತ್ರೆಗೆ ಹೊಂದಿಕೊಂಡಂತೆ ಒಂದೂ ಶವ ಪರೀಕ್ಷಾಗಾರದ ಅವಶ್ಯಕತೆ ಇದ್ದು ಅದನ್ನು ಶೀಘ್ರದಲ್ಲಿ ವ್ಯವಸ್ಥೆಗೊಳಿಸಿಕೊಡಬೇಕಾಗಿ ವಿನಂತಿಸುತ್ತೇನೆ.

ವಿಟ್ಲ ಸರಕಾರಿ ಆಸ್ಪತ್ರೆಯನ್ನು ವಿಸ್ತರಿಸಿ, ಸುಮಾರು ೨೦ ಹಾಸಿಗೆಗಳ ವ್ಯವಸ್ಥೆಗೊಳಿಸುವ ಯೋಜನೆ ಸರಕಾರದ ಪರಿಶೀಲನೆಯಲ್ಲಿದ್ದು ಅದಕ್ಕಾಗಿ ಅಗತ್ಯವಿರುವ ಭೂಮಿಯನ್ನು ಸಹ ಕಾದಿರಿಸಲಾಗಿದೆ. ಈ ಬಗ್ಗೆ ಸರಕಾರ ಕೈಗೊಂಡಿರುವ ಕ್ರಮಗಳೇನೆಂದು ತಿಳಿಯಬಯಸುತ್ತೇನೆ. ಈ ವಿಸ್ತರಣಾ ಕಾರ್ಯವನ್ನು ಶೀಘ್ರದಲ್ಲಿ ಕಾರ್ಯಗತಗೊಳಿಸುವ ಬಗ್ಗೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೆ, ಉತ್ತರವನ್ನು ತರಿಸಿ ಮಾನ್ಯ ಸದಸ್ಯರಿಗೆ ಕಳುಹಿಸುತ್ತೇನೆ.

(ಗೊಂದಲ)

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಬಿ. ಎ. ಉಮರಬ್ಬ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಇದ್ದು, ಇಲ್ಲದೇ ಇದ್ದಹಾಗೆ ಇದ್ದಾರೆ.

(ಗೊಂದಲ)

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

VIII. ರಾಜ್ಯದಲ್ಲಿರುವ ಅಂಗವಿಕಲರಿಗೆ ಮಾಶಾಸನವನ್ನು ಕೊಡುವುದು.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೆ, ಕರ್ನಾಟಕದಲ್ಲಿ ಸುಮಾರು ೨೬ ಸಾವಿರ ಹಳ್ಳಿಗಳು ಇವೆ. ಸರ್ವೆ ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಗಳಲ್ಲಿ ಪ್ರಕೃತಿಯಿಂದ ವಂಚಿತರಾದ ಅಂಗವಿಕಲರಾದ ಮಹಿಳೆಯರೂ, ಪುರುಷರೂ ಹಾಗೂ ಮಕ್ಕಳು ಇದ್ದಾರೆ. ಆದರೆ ಇವರೆಲ್ಲರಿಗೂ ಸರಕಾರದ

ಮಾಶಾಸನ ದೊರಕದೆ ಅನೇಕರು ಹೊಟ್ಟೆಗಿಲ್ಲದೆ ಉಪವಾಸವಿರುವ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಸರಕಾರವೂ ಈ ೨೬ ಸಾವಿರ ಹಳ್ಳಿಗಳಲ್ಲಿರುವ ಅಂಗವಿಕಲರ ಸಮೀಕ್ಷೆಯನ್ನು ನಡೆಸಿ ಇವರೆಲ್ಲರಿಗೂ ಮಾಶಾಸನವು ಅವರ ಮನೆಗೆ ತಲುಪುವಂತೆ ಮಾಡುವ ಕಾರ್ಯಕ್ರಮವನ್ನು ಕೂಡಲೇ ಕೈಗೊಳ್ಳಬೇಕು. ಸರಕಾರ ಕೂಡಲೇ ಈ ಕ್ರಮ ಕೈಗೊಂಡಲ್ಲಿ ಈ ಕಾರ್ಯವು ಜನತಾ ಸರಕಾರದ ಮೂಲಕ ಸಾಧನೆ ಆಗಲಿದೆ. ಆದ್ದರಿಂದ ಇದರ ಬಗ್ಗೆ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ಸಚಿವರನ್ನು ಒತ್ತಾಯಿಸಿ ಅವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಅಂಗವಿಕಲರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ೩,೬೦೦ ರೂಪಾಯಿಗಳ ಒಳಗೆ ಆದಾಯ ಬರತಕ್ಕ ಅಂಗವಿಕಲರಿಗೆಲ್ಲಾ ೫೦ ರೂಪಾಯಿಗಳ ಪ್ರಕಾರ ಮಾಶಾಸನ ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳತಕ್ಕ ಅಭಿಪ್ರಾಯ ಒಳ್ಳೆಯದು. ಅವರ ಅಭಿಪ್ರಾಯದ ಪ್ರಕಾರ ಸಮೀಕ್ಷೆ ಮಾಡತಕ್ಕದ್ದಕ್ಕೆ ಹೆಚ್ಚು ಖರ್ಚಾಗುವುದು ಇದೆ. ಈಗಾಗಲೇ ಸಾಕಷ್ಟು ಪ್ರಚಾರ ರೇಡಿಯೋ ಮುಖಾಂತರ ಆಗಿದೆ. ಇದರ ಪ್ರಚಾರ ಹಳ್ಳಿ-ಹಳ್ಳಿಗೂ ಮುಟ್ಟಿದೆ. ಆದ್ದರಿಂದ, ಸಮೀಕ್ಷೆ ಮಾಡತಕ್ಕದ್ದು ಅಗತ್ಯವಿಲ್ಲ.

IX. ಶಿಕಾರಿಪುರ ನಗರದಲ್ಲಿ ಕಂಬೈನ್ಡ್ ಆಸ್ಪತ್ರೆ ಕಟ್ಟಡದ ಕೆಲಸ ಹಾಗೂ ಪ್ರಥಮ ದರ್ಜೆ ಕಾಲೇಜಿನ ಕಟ್ಟಡದ ಕೆಲಸದ ನಿಂತಿರುವುದು.

ಶ್ರೀ ಕೆ. ವಸಂತಬಂಗೇರಾ (ಶ್ರೀ ಬಿ.ಎಸ್. ಯಡಿಯೂರಪ್ಪ ಅವರ ಪರವಾಗಿ).—ಅಧ್ಯಕ್ಷರೆ, ಶಿಕಾರಿಪುರ ನಗರದಲ್ಲಿ ಲೋಕೋಪಯೋಗಿ ಇಲಾಖಾ ವತಿಯಿಂದ ಕಂಬೈಂಡ್ ಆಸ್ಪತ್ರೆ ಕಟ್ಟಡ ಮತ್ತು ಪ್ರಥಮ ದರ್ಜೆ ಕಾಲೇಜಿನ ಕಟ್ಟಡದ ಕೆಲಸ ನಿಂತಿರುತ್ತದೆ. ಇಡೀ ತಾಲ್ಲೂಕಿನ ಜನತೆಗೆ ಆತ್ಯಗತ್ಯವಾಗಿ ಬೇಕಾದ ಈ ಕೆಲಸಗಳು ನಿಂತಿರುವುದರಿಂದ ಸಾರ್ವಜನಿಕರಿಂದ ತುಂಬಾ ತೊಂದರೆ ಆಗಿದೆ. ಕಾಲೇಜ್ ಕಟ್ಟಡವಿಲ್ಲದೆ ಬೇರೆ ಬೇರೆ ಕಟ್ಟಡಗಳಲ್ಲಿ ಕಾಲೇಜು ನಡೆಯುತ್ತಿದೆ. ಕಂಬೈಂಡ್ ಆಸ್ಪತ್ರೆ ಕಟ್ಟುತ್ತಿದ್ದ ಕಂಟ್ರಾಕ್ಟರ್ ದೈವಾಧೀನರಾಗಿ ನಂತರ ೬ ತಿಂಗಳು ಕೆಲಸ ನಿಂತಿದ್ದು ಆರ್.ಸಿ.ಸಿ. ಹಾಕುವ ಮಟ್ಟಕ್ಕೆ ಬಂದಿರುವ ಕಟ್ಟಡದ ಕೆಲಸವನ್ನು ಇಲಾಖೆಯಿಂದಲೇ ಮುಂದುವರಿಸಬೇಕೆಂದು ಸರಕಾರ ಆದೇಶ ಎತ್ತಿದ್ದರೂ ಅಧಿಕಾರಿಗಳ ಬೇಜವಾಬ್ದಾರಿಯಿಂದ ಕೆಲಸ ನಿಂತಿದೆ. ಹಾಗೆ ಸಾರ್ವಜನಿಕರಿಂದ ೧ ಲಕ್ಷ ರೂಪಾಯಿಗಳ ಹಣ ಸಂಗ್ರಹಿಸಿ, ಸರಕಾರಕ್ಕೆ ಪುಕ್ಕಟ್ಟೆಯಾಗಿ ೧೮ ಎಕರೆ ಜಮೀನನ್ನು ಕೊಟ್ಟು ಪ್ರಾರಂಭವಾದ ಕಾಲೇಜು ಕಟ್ಟಡದ ಕೆಲಸ ಒಂದೂ ವರ್ಷದಿಂದ ಇನ್ನೂ ಅಡಿಪಾಯ ತೆಗೆಯುವುದರಲ್ಲಿಯೇ ಇದೆ. ತಕ್ಷಣ ಕೆಲಸ ಪ್ರಾರಂಭಿಸಿ ಕಟ್ಟಡದ ಕೆಲಸವನ್ನು ಈ ವರ್ಷವೇ ಮುಗಿಸುವ ಬಗ್ಗೆ ಏನು ಕ್ರಮ ಕೈಗೊಂಡಿದೆ ಎಂಬ ವಿಷಯವನ್ನು ಮಾನ್ಯ ಮಂತ್ರಿಗಳಿಂದ ತಿಳಿಯಬಯಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ, ಒಬ್ಬ ಸದಸ್ಯರದ್ದು ಶಿಖರ ವಿಚಾರದ ಬಗ್ಗೆ ಇನ್ನೊಬ್ಬರು ಕೇಳಬಹುದೇ ?

ಅಧ್ಯಕ್ಷರು.—ಅವರು ಅಥಾರಿಟಿ ಕೊಟ್ಟಿದ್ದಾರೆ. ಅದಕ್ಕೆ ಹೇಳಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ, ಈ ಬಗ್ಗೆ ಲೋಕೋಪಯೋಗಿ ಇಲಾಖೆಯ ಮಂತ್ರಿಗಳ ಗಮನಕ್ಕೆ ತಂದು ಆ ಕೆಲಸವನ್ನು ಬೇಗ ಮುಗಿಸಲಿಕ್ಕೆ ಕೇಳಿಕೊಳ್ಳುತ್ತೇನೆ.

X. ದಕ್ಷಿಣ ಕನ್ನಡ ಜಿಲ್ಲೆಯ ಭೂನ್ಯಾಯ ಮಂಡಳಿಯ ಸದಸ್ಯರಿಗೆ ಮೊಕ್ಕಾಂ ಫೀ ಪ್ರಯಾಣ ಭತ್ಯ ನೀಡದಿರುವುದು.

ಶ್ರೀ ಕೆ, ಕುಶಾಲ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೫ ಕಡೆಗಳಿಂದ, ಈತನ ಭೂನ್ಯಾಯ ಮಂಡಳಿ ಸದಸ್ಯರಿಗೆ ಮೊಕ್ಕಾಂ ಫೀಸು, ಪ್ರಯಾಣ ಭತ್ಯೆ ನೀಡಿರುವುದಿಲ್ಲ. ಕಳೆದ ಅಧಿವೇಶನದಲ್ಲಿ ಈ ವಿಷಯ ಚರ್ಚಿಸಿದಾಗ ಮಾನ್ಯ ಕಂದಾಯ ಸಚಿವರು, ತಾಲ್ಲೂಕಿನ ಪ್ರತಿ ಭೂನ್ಯಾಯ ಮಂಡಳಿಗೆ ರೂ. ೨೫,೦೦೦ ನೀಡಲಾಗಿದೆ ಎಂದು ಉತ್ತರಿಸಿದರು. ಆದರೆ, ತಾಲ್ಲೂಕಿಗೆ ರೂ. ೨೫,೦೦೦ ಬದಲು ರೂ. ೧,೦೦೦ ಮಂಜೂರಾತಿ ಕೊಟ್ಟು ಬಿಲ್ಲು ಮಾಡುವಂತೆ ಆದೇಶ ನೀಡಿರುವುದು ತಿಳಿದು ಬಂದಿತ್ತು.